ಸಂಯುಕ್ತ ಕರ್ನಾಟಕ

Friday, December 11th, 2009

ಬೆಂಕಿ ನಿಗ್ರಹ ತರಬೇತಿ: ಜೈನ್ ಸಂಸ್ಥೆ ಒಪ್ಪಂದ

ಬೆಂಗಳೂರು, ಡಿ. 10: ಬೆಂಕಿಯಿಂದಾಗುವ ಅಪಾಯವನ್ನೆದುರಿಸುವ ತರಬೇತಿ ಕಾರ್ಯಕ್ರಮಗಳು ಮತ್ತು ಪ್ರಯೋಗ ಶಾಲೆಯನ್ನು ಆರಂಭಿಸುವ ಉದ್ದೇಶದಿಂದ ಜೈನ್ ಸಮೂಹ ಸಂಸ್ಥೆ ಅಮೆರಿಕದ ಅಂಡರ್‌ರೈಟರ್ಸ್ ಲ್ಯಾಬೋರೇಟರೀಸ್ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಬೆಂಕಿಯನ್ನು ನಿಗ್ರಹಿಸುವ ವಿಧಾನಗಳು, ಸುರಕ್ಷತೆಗಾಗಿ ಅನುಸರಿಸಬೇಕಾದ ಕ್ರಮಗಳು ಮುಂತಾದ ತರಬೇತಿ ಜೊತೆಗೆ ಬೆಂಕಿ ನಿರೋಧಕ ಉಪಕರಣಗಳನ್ನು ಒದಗಿಸುವ ಮತ್ತು ತಂತ್ರಜ್ಞರನ್ನು ನೇಮಿಸುವ ಕುರಿತು ಒಪ್ಪಂದ ಮಾಡಿಕೊಳ್ಳಲಾಯಿತು.

ಬೆಂಕಿ ಅನಾಹುತಗಳಲ್ಲಿ ಸುರಕ್ಷತೆ ಕಾಪಾಡಲು ಅನುಕೂಲವಾಗುವಂತೆ ವಿದ್ಯಾರ್ಥಿಗಳಿಗೆ ಪರೀಕ್ಷೆ ಮತ್ತು ಸುರಕ್ಷೆಗಳಲ್ಲಿನ ಅಭಿವೃದ್ಧಿ ಸಾಧನಗಳ ಕುರಿತು ತರಬೇತಿ ನೀಡಲಾಗುತ್ತದೆ ಎಂದು ಯುಎಲ್‌ನ ಮಾರುಕಟ್ಟೆ ವ್ಯವಸ್ಥಾಪಕ ನಿರ್ದೇಶಕ ಆರ್.ಎ. ವೆಂಕಟಾಚಲಂ ತಿಳಿಸಿದರು.

ಬೆಂಗಳೂರಿನ ಜೈನ್ ಶಿಕ್ಷಣ ಸಂಸ್ಥೆ ಬೆಂಕಿ ನಿಗ್ರಹ ಕುರಿತಂತೆ ತರಬೇತಿ ನೀಡುವ ಸಲುವಾಗಿ ಅಮೆರಿಕದ ಅಂಡರ್‌ರೈಟರ್ಸ್ ಲ್ಯಾಬೋರೇಟರೀಸ್ ಸಂಸ್ಥೆಯೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿತು. ಯುಎಲ್ ವಿಶ್ವವಿದ್ಯಾಲಯದ ಅಧ್ಯಕ್ಷ ಪ್ಯಾಟ್ರಿಕ್ ಬೋಯಲ್, ಜೈನ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ. ಆರ್. ಚೆನ್ನರಾಜ್ ಜೈನ್ ಮತ್ತು ಯುಎಲ್‌ನ ಮಾರುಕಟ್ಟೆ ವ್ಯವಸ್ಥಾಪಕ ನಿರ್ದೇಶಕ ಆರ್.ಎ. ವೆಂಕಟಾಚಲಂ ಉಪಸ್ಥಿತರಿದ್ದರು.

ಯುಎಲ್ ವಿಶ್ವವಿದ್ಯಾಲಯದ ಅಧ್ಯಕ್ಷ ಪ್ಯಾಟ್ರಿಕ್ ಬೋಯಲ್ ಮಾತನಾಡಿ, ಭಾರತದಲ್ಲಿನ ಅಗ್ನಿ ನಿರೋಧಕ ಉತ್ಪನ್ನಗಳ ಗುಣಮಟ್ಟವನ್ನು ಪರೀಕ್ಷಿಸಲು ಜೈನ್ ಶಿಕ್ಷಣ ಸಂಸ್ಥೆಗೆ ಅಗತ್ಯ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಬೆಂಕಿ ಅವಘಡಗಳು ಸಂಭವಿಸಿದಾಗ ತೆಗೆದುಕೊಳ್ಳಬೇಕಾದ ತುರ್ತು ಕಾರ್ಯಗಳ ಕುರಿತು ಅಗತ್ಯ ಮಾಹಿತಿಯನ್ನು ನೀಡಲಾಗುತ್ತದೆ ಎಂದು ಹೇಳಿದರು.